ಶ್ರೀ ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ತಾವು ಸೆಕ್ಷನ್ 10 (ಎ) ಬಗ್ಗೆ ತಾವು ರೆಫರ್ ಮಾಡಿದ್ದೀರಿ. A voluntary reference of disputes to arbitration. Where an industrial dispute exists or is apprehended and employer and the workmen agree to refer the dispute to an arbitration. ಅಲ್ಲವೇ ?

Sri K. R. Rameshkumar : Hon'ble Minister is also a human like any of us. There appears to be a misconception in his mind about the status of arbitrator. I have advised the Hon'ble Minister, he is showing earnestness. He will seek the wise counsel of his officers and come back. Let us not make it precipitate.

ಅಧ್ಯಕ್ಷರು : ಅವರು ತೆಗೆದುಕೊಳ್ಳಿ ಎಂದು ಹೇಳಿದ ಮೇಲೂ, ಇಂಟರ್‌ಫಿಯರ್ ಆಗುತ್ತೀರಿ. ಎನು ಇಲ್ಲ. I cannot understand. ಮಾನ್ಯ ಜಯಪ್ರಕಾಶ್ ಹೆಗ್ಡೆಯವರೇ, ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಸಪ್ಲಿಮೆಂಟರಿ ಡಿಮ್ಯಾಂಡ್‌ಅನ್ನು ತೆಗೆದುಕೊಳ್ಳೋಣ. Let him continue.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇಲ್ಲಿ ಇಂಟರ್‌ಪಿಯರ್ ಅಂತ ಅಲ್ಲ ಇವರು ಪಾಸ್ ಮಾಡಬೇಕೆಂದು ನಮ್ಮ ಹತ್ತಿರ ಏಕೆ ತರಬೇಕು? ಬಿಲ್ ಮೇಲೂ ಚರ್ಚೆ ಮಾಡುವುದು ಇಲ್ಲದಿದ್ದರೆ, ನೀವು ಪಾಸ್ ಮಾಡಿಕೊಳ್ಳಿ. ನಾವು ಸುಮ್ಮನೆ ಕುಳಿತುಕೊಳ್ಳುತ್ತೇವೆ.

ಅಧ್ಯಕ್ಷರು : ಅವರು ಮಾತನಾಡಿಕೊಂಡು ಬರಲಿ, ಎಂದು ಹೇಳಿದ ಮೇಲೂ ಸುಮ್ಮನೆ ಮಿನಿಸ್ಟರ್‌ರನ್ನು ಕೇಳುತ್ತಿದ್ದೀರಿ. ಆಯಿತು, ತಾವು ಕುಳಿತುಕೊಳ್ಳಿ, ಈಗ ಸಪ್ಲಿಮೆಂಟರಿ ಡಿಮ್ಯಾಂಡ್ ಅನ್ನು ತೆಗೆದುಕೊಳ್ಳೋಣ. ಮಾನ್ಯ ಮಿನಿಸ್ಟರ್ ರವರೇ, Talk with your Secretary. ಪಾಯಿಂಟ್ಸ್ ಅನ್ನು ನೋಟ್ ಮಾಡಿಕೊಂಡು ಬನ್ನಿ ಈಗ ಮಾನ್ಯ ಅರ್ಥ ಮಂತ್ರಿಯವರು ಸಪ್ಲಿಮೆಂಟರಿ ಡಿಮಾಂಡ್ ಅನ್ನು ಮಂಡನೆ ಮಾಡಿದ್ದಾರೆ. ತಾವು ಮಾತನಾಡಿ about the supplementary demands.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಈಗ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ವರದಿಯನ್ನು ಒಪ್ಪಿಸಬೇಕು.

ಅಧ್ಯಕ್ಷರು : ಆಯಿತು, place ಮಾಡಿ.

8. ವರದಿಗಳನ್ನೊಪ್ಪಿಸುವುದು.

ಶ್ರೀ ಕೆ. ಎಸ್. ಈಶ್ವರಪ್ಪ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕ ಪತ್ರ ಸಮಿತಿ) : ಮಾನ್ಯ ಅಧ್ಯಕ್ಷರೆ, 2004–05ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಅಧ್ಯಕ್ಷನಾದ ನಾನು, ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ, 1997–98 ರಿಂದ 2001–2002 ರವರೆಗಿನ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ವರದಿಯಲ್ಲಿನ

ಖಂಡಿಕೆಗಳ ಮೇಲಿನ 12ನೇ ವಿಧಾನಸಭೆಯ 2ನೇ ವರದಿಯನ್ನು ವಿಧಾನಸಭೆಯಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

9. ವಿತ್ತೀಯ ಕಾರ್ಯಕಲಾಪ.

2005-06ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಮುಂದುವರಿದ ಚರ್ಚೆ

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೆ, 2005-06ನೇ ಸಾಲಿನ ಪೂರಕ ಅಂದಾಜುಗಳ ಮೊತ್ತ 657ಕೋಟಿ ರೂಪಾಯಿಗಳು ಆಗಿದೆ. ಅದರಲ್ಲಿ ಕೆಲವು ಬಾಬ್ತುಗಳಿಗೆ ಹೆಚ್ಚು ಹಣವನ್ನು ಕೊಡುವುದಕ್ಕಾಗಿ ಇವತ್ತು ಇದನ್ನು ಸದನದ ಮುಂದೆ ಮಂಡಿಸಿದ್ದಾರೆ. ಇದನ್ನು ಕುಡಿಯುವ ನೀರಿಗಾಗಿ ಕೊಟ್ಟಿದ್ದಾರೆ. ಬಿತ್ತನೆ ಬೀಜಕ್ಕೆ ರಿಯಾಯಿತಿ ದರಕ್ಕಾಗಿ ಕೊಟ್ಟಿದ್ದಾರೆ. ಮಂಡ್ಯ ಸಕ್ಕರೆ ಕಾರ್ಖಾನೆ, ವ್ಯವಸ್ಥೆಗಾಗಿ ಕೊಟ್ಟಿದ್ದಾರೆ. ಕೆ. ಸಿ. ಸಿ. ಬ್ಯಾಂಕ್‌ಗೆ ಕೊಟ್ಟಿದ್ದಾರೆ. ಎಂವೈಗೆ 30 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದಕ್ಕೆ ಇನ್ನೂ ಸ್ವಲ್ಪ ಹೆಚ್ಚಿಗೆ ಹಣವನ್ನು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು. ಆದರೆ ಆಶ್ಚರ್ಯಕರವಾದ ಸಂಗತಿ ಎಂದರೆ ಹಾಸನದಲ್ಲಿ ವಿಷಪೂರಿತ ಸಾರಾಯಿಯನ್ನು ಕುಡಿದು ಸತ್ತರೆಂದು, ಅವರಿಗೆ ಕಾಂಪನ್‌ಸೇಷನ್ ಕೊಡುವ ಸಲುವಾಗಿ, 36ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ವಿಷಪೂರಿತ ಸಾರಾಯಿಯನ್ನು ಕುಡಿದು ಸಾಯುವುದರಲ್ಲಿ ಹಾಸನ ಜಿಲ್ಲೆಯವರು ಮೊದಲನೆಯವರಲ್ಲ. ರಾಜ್ಯದ ಎಲ್ಲಾ ಹಳ್ಳಿಗಳಲ್ಲೂ ಸತ್ತವರು ಇದ್ದಾರೆ. ಹಿಂದೆ ಯಾವಾಗಲೂ ಈ ರೀತಿ ಕಂಟ್ರಿ ಸಾರಾಯಿಯನ್ನೂ ಕುಡಿದು, ಸತ್ತವರಿಗೆ ಪರಿಹಾರವನ್ನು ಕೊಟ್ಟಿಲ್ಲ. ಸರ್ಕಾರ ಇದೊಂದು ಹೊಸ ಅಧ್ಯಾಯವನ್ನು ಪ್ರಾರಂಭ ಮಾಡಿದೆ. ಸತ್ತವರಿಗೆ ಪರಿಹಾರವನ್ನು ಕೊಡುವ ಬಗ್ಗೆ ನಮ್ಮದು ಏನೂ ಅಭ್ಯಂತರವಿಲ್ಲ, ಅವರು ಯಾವ ಉದ್ದೇಶಕ್ಕಾಗಿ ಸತ್ತರು. ಇದನ್ನು ಯಾರಿಗೆ ಕೊಡಬೇಕು ಎಂಬುದು ಬಹಳ ಮುಖ್ಯವಾಗಿದ್ದವು. ಇವತ್ತು ಯಾರೋ ಒಬ್ಬ ಕಳ್ಳಬಟ್ಟಿ ಸಾರಾಯಿಯನ್ನು ತಯಾರು ಮಾಡಿ, ಅದನ್ನು ಕುಡಿಸಿ, ಕೊಂದದ್ದಕ್ಕೆ ಸರ್ಕಾರದ ಖಜಾನೆಯಿಂದ 36ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ನಾನು ಕೇಳುವುದೇನೆಂದರೆ ರಾಜ್ಯದಲ್ಲಿ ಎಲ್ಲಾ ಹಳ್ಳಿಗಳಲ್ಲಿ ಕುಡಿದು ಸತ್ತವರಿಗೆ ಈ ಪರಿಹಾರವನ್ನು ಕೊಡುವಂಥಾದ್ದು ಆಗಬೇಕು. ಅದು ಆದರೂ ಅದು ಪದ್ಧತಿ ಆಗಲಿ, ಒಂದೇ ಊರಿನ ಸಲುವಾಗಿ, ಒಂದೇ ಜಿಲ್ಲೆಯ ಸಲುವಾಗಿ, ಇದೊಂದು ವಿಶೇಷವಾದ ಪ್ರಕರಣವಾಗಬಾರದೆಂದು, ನಾನು ಹೇಳುತ್ತೇನೆ. ಇದರಲ್ಲಿ ಹಾಸನ ಜಿಲ್ಲೆಯದು ಒಂದೇ ಇದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇಲ್ಲ, ಇದರಲ್ಲಿ ಬೆಂಗಳೂರು ಮತ್ತು ಹಾಸನ ಜಿಲ್ಲೆ ಎರಡೂ ಸೇರಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಇದನ್ನು ಸರ್ಕಾರದಿಂದ ಏಕೆ ಕೊಡಬೇಕು ? ಯಾರೋ ಕಳ್ಳಬಟ್ಟಿ ತಯಾರು ಮಾಡಿ ಇವರು ಕಳ್ಳಬಟ್ಟಿಯನ್ನು ಕುಡಿದು ಸತ್ತರೆ, ಸರ್ಕಾರ ಏಕೆ ಪರಿಹಾರವನ್ನು ಕೊಡಬೇಕೆಂದು, ಮೊನ್ನೆ ದಿವಸ ಇಲ್ಲಿ ಮಾತನಾಡಿದ್ದೇವೆ.